<u>**ಕರ್ನಾಟಕ ವಿಧಾನ ಪರಿಷತ್ತು**</u>

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಶಿಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **156** |
| ಉತ್ತರಿಸಬೇಕಾದ ದಿನಾಂಕ | : | 16.02.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಕಲ್ಯಾಣ ಕರ್ನಾಟಕದ ಪ್ರತೀ ಜಿಲ್ಲೆಗಳಿಗೂ ವಿವಿಧ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು;</td><td rowspan="2">2018-19 ರಿಂದ ಇಲ್ಲಿಯವರೆಗೆ ಕಲ್ಯಾಣ ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಒಳಗೊಂಡಂತೆ ವಿವಿಧ ವಸತಿ ಯೋಜನೆಯಡಿ 73643 ಮನೆಗಳು ಮಂಜೂರಾಗಿದ್ದು, 3660 ಮನೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. 10289 ಮನೆಗಳು ಪ್ರಗತಿಯಲ್ಲಿದ್ದು, ಇನ್ನುಳಿದ 59538 ಮನೆಗಳು ಪ್ರಾರಂಭವಾಗಬೇಕಿರುತ್ತದೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ.
<table>
<tr><th>ಜಿಲ್ಲೆ</th><th>ಮಂಜೂರಾದ ಮನೆಗಳು</th><th>ಪೂರ್ಣಗೊಂಡ ಮನೆಗಳು</th><th>ಪ್ರಗತಿಯಲ್ಲಿರುವ ಮನೆಗಳು</th><th>ಪ್ರಾರಂಭವಾಗದ ಮನೆಗಳು</th><th>ಬ್ಲಾಕ್ ಆದ ಮನೆಗಳು</th></tr>
<tr><td>ಬಳ್ಳಾರಿ</td><td>4813</td><td>122</td><td>191</td><td>4498</td><td>2</td></tr>
<tr><td>ಬೀದರ್</td><td>11853</td><td>13</td><td>206</td><td>11630</td><td>4</td></tr>
<tr><td>ಕಲಬುರ್ಗಿ</td><td>16784</td><td>755</td><td>1633</td><td>14387</td><td>9</td></tr>
<tr><td>ಕೊಪ್ಪಳ</td><td>9827</td><td>1032</td><td>2760</td><td>6024</td><td>11</td></tr>
<tr><td>ರಾಯಚೂರು</td><td>14402</td><td>834</td><td>2199</td><td>11294</td><td>75</td></tr>
<tr><td>ವಿಜಯನಗರ</td><td>8099</td><td>285</td><td>664</td><td>7138</td><td>12</td></tr>
<tr><td>ಯಾದಗಿರಿ</td><td>7865</td><td>619</td><td>2636</td><td>4567</td><td>43</td></tr>
<tr><td>ಒಟ್ಟು</td><td>73643</td><td>3660</td><td>10289</td><td>59538</td><td>156</td></tr>
</table></td></tr>
<tr><td>ಆ)</td><td>ಈ ಸಾಲಿನಲ್ಲಿ ಮಂಜೂರಾದ ಎಷ್ಟು ಮನೆಗಳ ನಿರ್ಮಾಣ ಮನೆಗಳ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ; ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ ಎಷ್ಟು;</td></tr>
<tr><td>ಇ)</td><td>ಮಂಜೂರಾದ ಮನೆಗಳ ನಿರ್ಮಾಣವನ್ನು ಎಷ್ಟು ಕಾಲಮಿತಿಯೊಳಗೆ ಸರ್ಕಾರ ಪೂರ್ಣಗೊಳಿಸಲಾಗುವುದು;</td><td>ಸರ್ಕಾರದ "ಮನೆ" ಮಾರ್ಗಸೂಚಿಯನ್ವಯ ನಿಗಮದಿಂದ ಕಾಮಗಾರಿ ಆದೇಶ ನೀಡಿದ 90 ದಿನಗಳೊಳಗಾಗಿ ಫಲಾನುಭವಿಯು ಮನೆಯ ಕಾಮಗಾರಿಯನ್ನು ಪ್ರಾರಂಭಿಸಬೇಕಿದ್ದು, ಒಂದು ವರ್ಷದೊಳಗಾಗಿ ಮನೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಆದರೆ, ಫಲಾನುಭವಿಗಳೇ ಮನೆಗಳನ್ನು ಸ್ವತಃ ನಿರ್ಮಿಸಿ ಕೊಳ್ಳುತ್ತಿದ್ದು, ನಿಗದಿಪಡಿಸಿದ ಕಾಲಮಿತಿಯೊಳಗಾಗಿ ಮನೆಗಳನ್ನು ಪೂರ್ಣಗೊಳಿಸುವಂತೆ ಅನುಷ್ಠಾನಾಧಿಕಾರಿಗಳ ಮುಖಾಂತರ ಹಿಂಬಾಲಿಕಾ ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಈ)</td><td>ವಿವಿಧ ಯೋಜನೆಯಡಿ ಮನೆಗಳು ಮಂಜೂರಾಗಿದ್ದರೂ, ಫಲಾನುಭವಿಗಳೇ ತಮ್ಮ ಸ್ವಂತ ಹಣದಲ್ಲಿ ಮನೆಗಳನ್ನು ನಿರ್ಮಿಸುತ್ತಿದ್ದು, ಸರಿಯಾದ</td><td>ವಿವಿಧ ಯೋಜನೆಗಳಡಿ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ಸರ್ಕಾರವು ಆದೇಶ ಸಂಖ್ಯೆ:ವಇ 154 ಹೆಚ್ಎಹೆಚ್ 2019,ದಿನಾಂಕ:16.11.2019 ರಲ್ಲಿ ಮನೆಗಳ ಪ್ರಗತಿಯನ್ನು ಜಿಯೋ ಆಧಾರಿತ "ವಿಜಿಲ್ ಆಪ್" ಮೂಲಕ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ</td></tr>
</table>

| | | |
|---|---|---|
| | ಸಮಯಕ್ಕೆ ಕಂತಿನ ಹಣ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೂಲಕ ಪುನರ್ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುತ್ತಿತ್ತು. ಇದರಿಂದ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯು ವಿಳಂಬವಾಗುತ್ತಿರುವುದನ್ನು ಸರ್ಕಾರವು ಮನಗಂಡು ಆದೇಶ ಸಂಖ್ಯೆ:ವಇ 75 ಹೆಚ್ಎಹೆಚ್ 2021,ದಿನಾಂಕ:07.09.2021 ರಲ್ಲಿ ವಿಜಿಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಪ್ರತ್ಯೇಕವಾಗಿ ಪರಿಶೀಲಿಸುವುದನ್ನು ಮತ್ತಷ್ಟು ಸರಳೀಕರಿಸಿ In-House ಮೂಲಕ ಅಭಿವೃದ್ಧಿ ಪಡಿಸಿರುವ "Indira-Vigil" ವೆಬ್ ಆಪ್ ಮೂಲಕ ಪರಿಶೀಲಿಸಿದ ನಂತರ ಅನುದಾನ ಬಿಡುಗಡೆ ಅನುಮತಿ ನೀಡಿರುತ್ತದೆ. ಅದರಂತೆ ವಿವಿಧ ವಸತಿ ಯೋಜನೆಗಳಡಿ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ಯಾವುದೇ ವಿಳಂಬವಾಗದಂತೆ ಫಲಾನುಭವಿಗಳ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.<br><br>2018-19 ರಿಂದ ಜನವರಿ 2022 ರ ಅಂತ್ಯದವರೆಗೆ ಹಿಂದಿನ ಶ್ರೇಣಿಯನ್ನೊಳಗೊಂಡಂತೆ ಕಲ್ಯಾಣ ಕರ್ನಾಟಕದಡಿ ಬರುವ ಜಿಲ್ಲೆಗಳಿಗೆ ರೂ.2500.48 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಪ್ರಸ್ತುತ ಭೌತಿಕ ಪ್ರಗತಿಗನುಗುಣವಾಗಿ ಆಧಾರ್ ಜೋಡಣೆಗೊಂಡ ಫಲಾನುಭವಿಗಳಿಗೆ ಅನುದಾನ ಬಿಡುಗಡೆಮಾಡಲು ಬಾಕಿ ಇರುವುದಿಲ್ಲ. |
| ಉ) | ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕಂತಿನ ಹಣವನ್ನು ಬಿಡುಗಡೆ ಮಾಡಲಾಗುವುದು ? | |

ಸಂಖ್ಯೆ :ವಇ 29 ಹೆಚ್ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು